ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ - 583105

ಕುಲಸಚಿವರು(ಮೌಲ್ಯಮಾಪನ) ದೂರವಾಣಿ ಸಂ. 08392-241011

ಕ್ರ.ಸಂ. ವಿಶ್ರೀಕೃವಿಬ/ಪರೀಕ್ಷಾ/ಸುತ್ತೋಲೆ/2017-18/1792 ದಿನಾಂಕ. 21.09.2017

# ಸುತ್ತೋಲೆ

ವಿಷಯ: ಸ್ನಾತಕ ಪದವಿ ವಿದ್ಯಾರ್ಥಿಗಳ ಹಾಜರಾತಿ ವರದಿಯನ್ನು ಖಚಿತಪಡಿಸಿಕೊಂಡು ಪರೀಕ್ಷೆ ಬರೆಯಲು ಅನುಮತಿ ನೀಡುವ ಕುರಿತು.

***

ಈ ಸುತ್ತೋಲೆ ಮೂಲಕ ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಗಮನಕ್ಕೆ ತರಬಯಸುವುದೇನೆಂದರೆ 2017-18ನೇ ಸಾಲಿನ ಸ್ನಾತಕ ಪದವಿಗಳ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳನ್ನು ನವೆಂಬರ್-2017 ರ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುವುದು. ವಿಶ್ವವಿದ್ಯಾಲಯದ ನಿಯಮಾನುಸಾರ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಕಡ್ಡಾಯವಾಗಿ 75% ಪ್ರತಿಶತ ಹಾಜರಾತಿ ಇರಬೇಕಾಗಿದ್ದು, ಒಂದುವೇಳೆ ತಮ್ಮ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ 1, 3 ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಹಾಜರಾತಿಯು 75% ಪ್ರತಿಶತಕ್ಕಿಂತ ಕಡಿಮೆಯಿದ್ದಲ್ಲಿ ಸದರಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ತಡೆಹಿಡಿದು ಕೂಡಲೇ ಪರೀಕ್ಷಾ ವಿಭಾಗಕ್ಕೆ ಮಾಹಿತಿಯನ್ನು ನೀಡಲು ಸೂಚಿಸಲಾಗಿದೆ.

ಮುಂದುವರೆದು ಒಂದುವೇಳೆ 75% ಪ್ರತಿಶತಕ್ಕಿಂತ ಕಡಿಮೆ ಹಾಜರಾತಿ ಇದ್ದು ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ತಿಳಿಸದೆ ನೇರವಾಗಿ ಪರೀಕ್ಷೆಗೆ ಹಾಜರುಪಡಿಸಿದ್ದಲ್ಲಿ ಅದರಿಂದ ಉಂಟಾಗುವ ತೊಂದರೆಗಳಿಗೆ ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಂಶುಪಾಲರೆ ಜವಾಬ್ದಾರಾಗುತ್ತಾರೆಂದು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

21/9

ಕುಲಸಚಿವರು (ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University,
Jnana Sagar Campus, Vinayakanagar,
Cantonment, BALLARI-583 104.

ಗೆ,

ಪ್ರಾಂಶುಪಾಲರು, ವಿಶ್ವವಿದ್ಯಾಲಯದ ಅಧಿಕ್ಕೊಳಪಟ್ಟ ಎಲ್ಲಾ ಮಹಾವಿದ್ಯಾಲಯಗಳು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆ

ಪ್ರತಿಗಳು :

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ-ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ-ರವರಿಗೆ ಮಾಹಿತಿಗಾಗಿ.
3. ಲಾಜಿಸಿಸ್. ವಿ.ಶೀ.ಕ.. ವಿಶ ವಿದಾ.ಲಯ. ಬಳಾ ರಿ-ರವರಿಗೆ ಮಾಹಿತಿಗಾಗಿ.